ದೂರವಾಣಿ ಸಂ: 080-22243926
ಫ್ಯಾಕ್ಸ್ ಸಂ: 080-22110134

ವೆಬ್‌ಸೈಟ್: https://kptcl.karnataka.gov.in/
ಇ-ಅಂಚೆ: gmtkptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

ಸಂಖ್ಯೆ: ಕವಿಪ್ರನಿನಿ/ಬಿ19/345/85-86

ದಿನಾಂಕ: 25 JUL 2023

## ಸುತ್ತೋಲೆ

**ವಿಷಯ:** ಮುಂಗಾರು ಆಕಸ್ಮಿಕ ಯೋಜನೆ (Monsoon Contingency Plan) ಅನ್ನು ಎಲ್ಲಾ ಪ್ರಸರಣ ವಲಯಗಳಲ್ಲಿ ಜಾರಿಗೆ ತರುವ ಬಗ್ಗೆ.

**ಉಲ್ಲೇಖ:**
1. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85-86 ದಿ: 24.05.2021.
2. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಸುತ್ತೋಲೆ ಸಂಖ್ಯೆ: ಎನರ್ಜಿ 236 ವಿಎಸ್‌ಸಿ 2022 ದಿ: 21.05.2022.
3. ಎಲ್ಲಾ ಮು.ಇಂ(ವಿ), ಪ್ರಸರಣ ವಲಯ ರವರುಗಳಿಗೆ ವ್ಯವಹರಿಸಿರುವ ನಿಗಮ ಕಚೇರಿ ಪತ್ರ ಸಂಖ್ಯೆ: ಬಿ19/33425/22-23[5] ದಿ: 10.06.2022.
4. ಎಲ್ಲಾ ಮು.ಇಂ(ವಿ), ಪ್ರಸರಣ ವಲಯ ರವರುಗಳಿಗೆ ವ್ಯವಹರಿಸಿರುವ ನಿಗಮ ಕಚೇರಿ ಪತ್ರ ಸಂಖ್ಯೆ: ಬಿ19/33425/22-23[5] ದಿ: 17.06.2023.
5. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಸುತ್ತೋಲೆ ಸಂಖ್ಯೆ: ಎನರ್ಜಿ ವಿಎಸ್‌ಸಿ 134/2023 ದಿ: 27.06.2023.
6. ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 24.07.2023.

*********

ಕವಿಪ್ರನಿನಿ ವ್ಯಾಪ್ತಿಯಲ್ಲಿನ ಪ್ರಸರಣ ವಲಯಗಳಲ್ಲಿ ಮುಂಗಾರು ಋತುಮಾನದ ಸಂದರ್ಭದಲ್ಲಿ, ವಿದ್ಯುತ್ ಸರಬರಾಜಿನಲ್ಲಿ ಮತ್ತು ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಉಲ್ಲೇಖ (1) ಮತ್ತು (2)ರಲ್ಲಿನ ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

ಸದರಿ ಸುತ್ತೋಲೆಗಳಲ್ಲಿ ಸೂಚಿಸಲಾಗಿರುವ ಮಾರ್ಗಸೂಚಿಗಳನ್ನನುಸರಿಸಿ, ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯನ್ನು ತಡೆಗಟ್ಟಲು ಹಾಗೂ ವಿದ್ಯುತ್ ಜಾಲದ ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಉಲ್ಲೇಖ ಪತ್ರ (3) ಮತ್ತು (4) ರಲ್ಲಿ ಸೂಚಿಸಲಾಗಿರುತ್ತದೆ.

ಪ್ರಸಕ್ತ ವರ್ಷದ ಮುಂಗಾರು ಋತುಮಾನವು ಪ್ರಾರಂಭವಾಗಿದ್ದು, ವಿದ್ಯುತ್ ಉತ್ಪಾದನೆ/ಪ್ರಸರಣೆ/ಸರಬರಾಜು ಕಂಪನಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತಾಗಿ ಉಲ್ಲೇಖ (5)ರನ್ವಯ ಇಂಧನ ಇಲಾಖೆಯಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ಸುತ್ತೋಲೆಯಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಹಾಗೂ ಈ ಹಿಂದೆ ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿನ ಅಂಶಗಳನ್ನು ಪರಿಗಣಿಸಿ ಪ್ರಸಕ್ತ ಮುಂಗಾರು ಸಂದರ್ಭದಲ್ಲಿ ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು, ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯನ್ನು ತಡೆಗಟ್ಟಲು ಹಾಗೂ ವಿದ್ಯುತ್ ಜಾಲದ ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ ಸಂಬಂಧಿಸಿದ ನಿರ್ವಹಣಾ ಪ್ರಾಧಿಕಾರಗಳು ಅಗತ್ಯ ಕ್ರಮ ಕೈಗೊಳ್ಳಲು ಈ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ.

FR-173
25/7/23

ವಿದ್ಯುತ್ ಪ್ರಸರಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾಗಿರುವ ಅಗತ್ಯ ಕ್ರಮಗಳನ್ನು ಈ ಕೆಳಕಂಡಂತೆ ಮರು ಉಲ್ಲೇಖಿಸಿದೆ.

1. ವಿದ್ಯುತ್ ಜಾಲದ ಪ್ರಸರಣ ಮಾರ್ಗಗಳು, ವಿದ್ಯುತ್ ಉಪ–ಕೇಂದ್ರಗಳ ಉಪಕರಣಗಳ ನಿರ್ವಹಣೆಯನ್ನು ಆದ್ಯತೆಯ ಮೇರೆಗೆ ಹಾಗೂ ಪರಿಣಾಮಕಾರಿಯಾಗಿ ಕೈಗೊಳ್ಳುವುದು.
2. ಮುಂಗಾರು ಸಮಯದಲ್ಲಿ ವಿದ್ಯುತ್ ಜಾಲವನ್ನು ಸುಸ್ಥಿತಿಯಲ್ಲಿರುವುದನ್ನು ಖಾತರಿಪಡಿಸಿಕೊಳ್ಳಲು ಎಲ್ಲಾ ಹಂತಗಳಲ್ಲಿ ಪರಿಣಾಮಕಾರಿಯಾಗಿ ಸಂವಹನ ಸಾಧಿಸಿ, ತುರ್ತಾಗಿ ನಿರ್ವಹಣಾ ಕಾರ್ಯವನ್ನು ಪೂರ್ಣಗೊಳಿಸುವುದು.
3. ಮುಂಗಾರು ಸೂಕ್ಷ್ಮ ಪ್ರದೇಶಗಳು, ಸೂಕ್ಷ್ಮ ಸ್ಥಾವರಗಳು ಮತ್ತು ಪ್ರಸರಣ ಮಾರ್ಗಗಳು ಇತ್ಯಾದಿಗಳನ್ನು ಆದ್ಯತೆ ಮೇಲೆ ಗುರುತಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.
4. ಪ್ರಸರಣಾ ಜಾಲದ ನಿರ್ವಹಣೆಗೆ ಬೇಕಾಗುವ ಅಗತ್ಯ ಸಾಮಗ್ರಿಗಳಾದ ವಿದ್ಯುತ್ ಗೋಪುರಗಳು, ವಾಹಕಗಳು, ಇನ್ಸುಲೇಟರ್ಸ್, ಹಾಗೂ ಇತರೆ ಅಗತ್ಯ ಸಾಮಗ್ರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಉಗ್ರಾಣದಲ್ಲಿ ದಾಸ್ತಾನು ಇಟ್ಟುಕೊಳ್ಳುವುದು.
5. ಎಲ್ಲಾ ಹಂತದ ನಿರ್ವಹಣಾ ಅಧಿಕಾರಿ/ನೌಕರರುಗಳು ಮುಂಗಾರಿನ ಅವಧಿಯಲ್ಲಿ ಕೇಂದ್ರ ಸ್ಥಾನದಲ್ಲಿ ಇದ್ದು, ಉಸ್ತುವಾರಿ ಹಾಗೂ ಮೇಲ್ವಿಚಾರಣೆಯನ್ನು ನಡೆಸುವುದು. ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸ್ಥಿರ ದೂರವಾಣಿ, ಮೊಬೈಲ್ ಫೋನ್‌ಗಳನ್ನು ಸದಾ ಚಾಲನೆಯಲ್ಲಿಟ್ಟುಕೊಳ್ಳುವುದು.
6. ಎಲ್ಲಾ ನಿರ್ವಹಣಾ ಅಧಿಕಾರಿ/ಸಿಬ್ಬಂದಿಗಳು ತುರ್ತು ಸಂದರ್ಭದಲ್ಲಿ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಅವಶ್ಯಕ ಸಾಧನಾ/ಸಲಕರಣೆಗಳನ್ನು ಇರುವಂತೆ ಖಾತ್ರಿ ಪಡಿಸಿಕೊಳ್ಳುವುದು.
7. Rubber Hand gloves, Rain Coat, Helmet, Safety Belt, Ladder ಇತ್ಯಾದಿ ಸುರಕ್ಷತಾ ಸಲಕರಣೆಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಸಿಬ್ಬಂದಿಗಳಿಗೆ ಸೂಚಿಸುವುದು.
8. ಮುಂಗಾರು ಆಕಸ್ಮಿಕದ ಅವಘಡಗಳ ತೀವ್ರತೆಯನ್ನಾಧರಿಸಿ ಮೇಲಾಧಿಕಾರಿಗಳಿಗೆ ತಕ್ಷಣವೇ ವರದಿ ಮಾಡುವುದು.
9. ಮುಂಗಾರು ಆಕಸ್ಮಿಕ ಯೋಜನೆಯಡಿ ತಾತ್ಕಾಲಿಕ ಗ್ಯಾಂಗ್‌ಮನ್‌ಗಳ ಅವಶ್ಯಕತೆ ಕಂಡುಬಂದಲ್ಲಿ, ನಿಯೋಜನೆಗೆ ಕ್ರಮ ಕೈಗೊಳ್ಳುವುದು.
10. ಅಪಾಯಕಾರಿ ಗೋಪುರಗಳನ್ನು ಗುರುತಿಸಿ, ಸರಿಪಡಿಸಲು ಕ್ರಮ ವಹಿಸುವುದು.
11. ಅಪಾಯಕಾರಿ ಸ್ಥಾವರಗಳನ್ನು / ಗೋಪುರಗಳನ್ನು ಗುರುತಿಸಿ, ತುರ್ತಾಗಿ ಸರಿಪಡಿಸಲು ಕ್ರಮ ವಹಿಸುವುದು.
12. ಮುಂಗಾರು ಸಮಯದಲ್ಲಿ ವಿದ್ಯುತ್ ಮಾರ್ಗಗಳಿಂದ ಅಪಘಾತಗಳು ಜರುಗುವ ಸನ್ನಿವೇಶಗಳ ಬಗ್ಗೆ ಹಾಗೂ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಂಬಂಧಿಸಿದ ಎಸ್ಕಾಂ ಅಧಿಕಾರಿಗಳ ಸಮನ್ವಯದೊಂದಿಗೆ ಕ್ರಮ ವಹಿಸುವುದು.
13. ಪ್ರಮುಖವಾದ ಸ್ಥಾವರಗಳನ್ನು ಗುರುತಿಸಿ ಅವುಗಳ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾಗದಂತೆ ನಿರ್ವಹಣೆ ಮಾಡುವುದು. ಉದಾಹರಣೆಗೆ ಆಮ್ಲಜನಕ ಉತ್ಪಾದನಾ ಘಟಕಗಳು, ಆಸ್ಪತ್ರೆಗಳು, ಪ್ರಮುಖ ಕಚೇರಿಗಳು, ದೂರವಾಣಿ ವಿನಿಮಯ ಕೇಂದ್ರಗಳು ಇತ್ಯಾದಿ.
14. Radial ಪ್ರಸರಣ ಮಾರ್ಗಗಳನ್ನು ಸುಸ್ಥಿತಿಯಲ್ಲಿಡಲು ಅಗತ್ಯ ಕ್ರಮ ಕೈಗೊಳ್ಳುವುದು.
15. ದುರಂತ ಸಂದರ್ಭಗಳಲ್ಲಿ ತುರ್ತಾಗಿ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸಿ ಹಾನಿಯನ್ನು ಕಡಿಮೆಗೊಳಿಸುವುದು.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ

**ಇವರಿಗೆ:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ, ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / ಸಿವಿಲ್, ಕವಿಪ್ರನಿನಿ.
6. ಎಲ್ಲಾ ಉಪ-ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಕಂಪನಿ ಕಾರ್ಯದಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಲೆಕ್ಕಾಧಿಕಾರಿ (ಕೋಡಿಫ್ಲಿಕೇಶನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿರ್ದೇಶಕರುಗಳ ಮುಂದೆ ಮಂಡಿಸಲು.

**ಪ್ರತಿಯನ್ನು:**

ಅಧೀಕ್ಷಕ ಇಂಜಿನಿಯರು (ವಿ), (ಐಟಿ), ಕವಿಪ್ರನಿನಿ ರವರಿಗೆ ಕವಿಪ್ರನಿನಿ ಜಾಲತಾಣದಲ್ಲಿ ಸುತ್ತೋಲೆಯನ್ನು ಪ್ರಕಟಿಸಲು ವ್ಯವಸ್ಥೆ ಮಾಡಲು.